ಇ) ಬಸವಕಲ್ಯಾಣ ಐತಿಹಾಸಿಕ ಪಟ್ಟಣವಾಗಿದ್ದು ಇದನ್ನು ಸಹ ಕೂಡಲಸಂಗಮದಂತೆ ಅಭಿವೃದ್ಧಿಗೊಳಿಸುವುದು ಯಾವಾಗ?

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು)

ಅ) 2004–2005ನೇ ಸಾಲಿನ ಆಯವ್ಯದಲ್ಲಿ ಬಸವಕಲ್ಯಾಣದಲ್ಲಿ ಅಭಿವೃದ್ಧಿ ಮಂಡಳಿಯ ಕಾರ್ಯಕ್ರಮಗಳಿಗಾಗಿ ಯಾವುದೇ ಅನುದಾನ ಕಲ್ಪಿಸಿರುವುದಿಲ್ಲ. ಆದರೆ 2005–06ನೇ ಸಾಲಿನ ಆಯವ್ಯಯದಲ್ಲಿ ರೂ. 5.00 ಕೋಟಿ ಅನುದಾನ ಕಲ್ಪಿಸಲು ಕ್ರಮ ಕೈಗೊಳ್ಳಲಾಗಿದೆ. ಬಸವಕಲ್ಯಾಣ ಅಭಿವೃದ್ಧಿ ಮಂಡಳಿ ಬಿಲ್ 2005 ವಿಧಾನ ಸಭೆಯಲ್ಲಿ ದಿನಾಂಕ:16.3.05 ರಂದು ಸರ್ವಾನುಮತದಿಂದ ಅಂಗೀಕಾರವಾಗಿದೆ.

ಆ) 2005–2006ನೇ ಸಾಲಿನ ಆಯವ್ಯಯದಲ್ಲಿ ಅನುದಾನ ಬಿಡುಗಡೆಯಾದ ನಂತರ ಕಾರ್ಯಕ್ರಮಗಳ ಅನುಷ್ಠಾನ ಕೈಗೊಳ್ಳಲಾಗುವುದು.

ಇ) ಅದೇ

2124 (1925) ಶ್ರೀ ಮಲ್ಲಿಕಾರ್ಜುನ ಸಿದ್ದರಾಮಪ್ಪ ಖೂಬ (ಬಸವಕಲ್ಯಾಣ): ಮಾನ್ಯ ಕಾರ್ಮಿಕ ಮತ್ತು ಹಜ್ ರಾಜ್ಯ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಾಲಕಾರ್ಮಿಕ ಪದ್ಧತಿಯನ್ನು ರದ್ದುಪಡಿಸಲು ಶ್ರೇಷ್ಠ ನ್ಯಾಯಾಲಯದ ಆದೇಶವಿದ್ದರೂ ಇಲ್ಲಿಯವರೆವಿಗೂ ಹೋಟೆಲ್‌ಗಳಲ್ಲಿ ಹಾಗೂ ಸಣ್ಣಗುಡಿ ಕೈಗಾರಿಕೆಗಳಲ್ಲಿ ಬಾಲಕಾರ್ಮಿಕ ಪದ್ಧತಿ ಜಾರಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹೋಟೆಲ್‌ಗಳಲ್ಲಿ ಬಾಲ ಕಾರ್ಮಿಕರು ಶೋಷಣೆಗೊಳಗಾಗುತ್ತಿರುವುದನ್ನು ನೋಡಿಯು ನೋಡದಂತೆ ಇರುವ ಅಧಿಕಾರಿಗಳ ವಿರುದ್ಧ ಸರ್ಕಾರ ಕೈಗೊಳ್ಳುವ ಕಟ್ಟುನಿಟ್ಟಿನ ಕ್ರಮವೇನು;

ಇ) ಕಾರ್ಮಿಕರ ಕಲ್ಯಾಣಕ್ಕಾಗಿ ಸರ್ಕಾರ ಯಾವ ಯಾವ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ;

ಈ) ಅವರುಗಳಿಗೆ ಕಡಿಮೆ ವೆಚ್ಚದ ಮನೆಗಳನ್ನು ಒದಗಿಸುವ ಯೋಜನೆ ಸರ್ಕಾರದ ಚಿಂತನೆಯಲ್ಲಿದೆಯೇ; ಹಾಗೂ ಅವು ಯಾವುವು?

ಶ್ರೀ ತನ್ವೀರ್ ಸೇಠ್ (ಕಾರ್ಮಿಕ ಮತ್ತು ಹಜ್ ರಾಜ್ಯ ಸಚಿವರು)

ಅ) ಹೌದು

ಆ) ಬಾಲ ಕಾರ್ಮಿಕ ಕಾಯ್ದೆ ಅನುಷ್ಠಾನದಲ್ಲಿ ಅಧಿಕಾರಿಗಳು ಹಾಗೂ ನಿರೀಕ್ಷಕರುಗಳು ಕರ್ತವ್ಯ ಲೋಪವೆಸಗಿದಲ್ಲಿ ಅಂತವರ ವಿರುದ್ಧ ಶಿಸ್ತಿನ ಕ್ರಮ ತೆಗೆದುಕೊಳ್ಳಲಾಗುತ್ತದೆ. ಇಲ್ಲಿಯ ತನಕ 3 ಕಾರ್ಮಿಕ ಅಧಿಕಾರಿಗಳ ಹಾಗೂ ಇಬ್ಬರು ನಿರೀಕ್ಷಕರುಗಳನ್ನು ಈ ವಿಷಯಕ್ಕೆ ಸಂಬಂಧಿಸಿದಂತೆ ಕರ್ತವ್ಯ ಲೋಪವೆಸಗಿರುವರೆನ್ನುವ ಕಾರಣಕ್ಕೆ ಅಮಾನತ್ತಿನಲ್ಲಿಡಲಾಗಿದೆ.

ಇ) ಇ.ಎಸ್.ಐ. ಕಾಯ್ದೆ, ಪಿ.ಎಫ್, ಕಾಯ್ದೆ ಹಾಗೂ ಬೀಡಿ ವೆಲ್ ಫೇರ್ ಕಾಯ್ದೆಗಳ ಅಡಿಯಲ್ಲಿ ಕೇಂದ್ರ ಸರ್ಕಾರವು ವಿವಿಧ ಕಾರ್ಯಕ್ರಮಗಳನ್ನು ಕಾರ್ಮಿಕರ ಕಲ್ಯಾಣಕ್ಕಾಗಿ ಹಮ್ಮಿಕೊಂಡಿರುತ್ತದೆ. ಅದೇ ರೀತಿ ರಾಜ್ಯ ಸರ್ಕಾರವು ಸಹ ಅಸಂಘಟಿತ ಕಾರ್ಮಿಕರ ಕಲ್ಯಾಣಕ್ಕಾಗಿ ಒಂದು ಮಸೂದೆಯನ್ನು ಜಾರಿಗೆ ತರಲು ಯೋಜಿಸಿರುತ್ತದೆ.

ಈ) ಆಶ್ರಯ, ಇಂದಿರಾ ಆವಾಸ್ ಯೋಜನೆ, ಅಂಬೇಡ್ಕರ್ ವಸತಿ ಯೋಜನೆಗಳ ಅಡಿಯಲ್ಲಿ ಕಡಿಮೆ ವೆಚ್ಚದಲ್ಲಿ ಮನೆಗಳನ್ನು ಕಾರ್ಮಿಕರೂ ಸೇರಿದಂತೆ ಆರ್ಥಿಕವಾಗಿ ದುರ್ಬಲವರ್ಗದವರಿಗೆ ಒದಗಿಸಲಾಗುತ್ತಿದೆ. ಆದರೆ ಒಬ್ಬ ಬಿಡಿ ಕಾರ್ಮಿಕ ಸ್ವಂತ ನಿವೇಶನ ಅಥವಾ ಸಂಘದ ಮೂಲಕ ಪಡೆದ ನಿವೇಶನ ಹೊಂದಿದ್ದಲ್ಲಿ, ಆತನಿಗೆ ಅಲ್ಲಿ ಮನೆ ಕಟ್ಟಲು ರೂ.40,000 ಅನುದಾನವನ್ನು ಕೇಂದ್ರ ಕಲ್ಯಾಣ ಆಯುಕ್ತರು, ಬೆಂಗಳೂರು ಇವರು ನೀಡುತ್ತಾರೆ.

2125 (2899) ಶ್ರೀ ಮಾಮನಿ ವಿಶ್ವನಾಥ ಕರಬಸಪ್ಪ (ಪರಸಗಡ): ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸವದತ್ತಿ ತಾಲ್ಲೂಕಿನ ಶ್ರೀ ರೇಣುಕಾ ಯಲ್ಲಮ್ಮನ ಗುಡ್ಡದಲ್ಲಿ 1097 ಎಕರೆ ಮತ್ತು ಇತರೆ ಗುಡ್ಡಗಳಲ್ಲಿ ಸಾಕಷ್ಟು ಜಮೀನು ಖಾಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ಖಾಲಿ ಜಮೀನಿನಲ್ಲಿ ಮರ ನೆಡುವುದಕ್ಕೆ ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

ಅ) ಹೌದು.

ಆ) ಖಾಲಿ ಇರುವ ಜಮೀನು ತುಂಬಾ ಕಲ್ಲುಬಂಡೆಗಳಿಂದ ಕೂಡಿರುವುದರಿಂದ ಅರಣ್ಯೀಕರಣ ಕೆಲಸ ಕೈಗೊಳ್ಳುವುದು ಅತೀ ವೆಚ್ಚದಾಯಕ ಹಾಗೂ ಕಷ್ಟಕರವಾಗುತ್ತದೆ. ಎಲ್ಲಮ್ಮನ ಗುಡ್ಡವು ಯಾತ್ರಾರ್ಥಿಗಳಿಗಾಗಿ ಇರುವುದರಿಂದ ವರ್ಷವಿಡಿ ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಬರುವುದರಿಂದ ಈಗಾಗಲೇ ಭಾಗಶ: ಹಮ್ಮಿಕೊಂಡಿರುವ ನೆಡುತೋಪುಗಳು ಕ್ಷೀಪಣಿ ರೀತಿಯಲ್ಲಿ ಇರುವುದರಿಂದ ಅಲ್ಲಿ ಮತ್ತೆ ಅರಣ್ಯೀಕರಣವನ್ನು ಮಾಡುವುದು ಉತ್ತಮವಲ್ಲವೆಂದು ತೋರುತ್ತದೆ.